VIJAYAKUMAR KANNUR
Digitally signed by VIJAYAKUMAR KANNUR
Date: 2026.01.30 17:10:35 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 29.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 7 ರವರ ಪರ ಶ್ರೀ ಹೆಚ್ ಎ ಕೆ ವಕೀಲರಿಂದ :**

ನನಗೆ ಈ ಸಿದ್ದಾಪೂರ ಮನೆತನದ ಬಗ್ಗೆ ಸುಮಾರು 30 ವರ್ಷಗಳಿಂದಲೂ ಮಾಹಿತಿ ಇರುವುದು. ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ಪಾಲು ವಿಭಾಗ ಕೋರಿ ದಾಖಲು ಮಾಡಿರುವರು. ದಾವಾ ಆಸ್ತಿಗಳ ಸರ್ವೇ ನಂಬರ್ 308/4 ವಿಸ್ತೀರ್ಣ 2 ಎಕರೆ 4 ಗುಂಟೆ, ಸರ್ವೇ ನಂಬರ್ 308/10 ವಿಸ್ತೀರ್ಣ 2 ಎಕರೆ 4 ಗುಂಟೆ , ಸರ್ವೇ ನಂಬರ್ 308/11 ವಿಸ್ತೀರ್ಣ 2 ಎಕರೆ 3 ಗುಂಟೆ ಹಾಗೂ ಸರ್ವೇ ನಂಬರ್ 298/3 ಬಿ ವಿಸ್ತೀರ್ಣ 7 ಎಕರೆ 10 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ದಾಖಲು ಮಾಡಿರುವರು.

2. ವಾದಿಯರ ಕುಟುಂಬದ ಮೂಲ ಪುರುಷನಾದ ಬಾಳಪ್ಪನ ಮಗ ವಿಜಯಕುಮಾರ ಎಂಬುವವನು ವಿವಾಹವಾಗದೇ ಮೃತ ಪಟ್ಟಿರುವನು ಎಂದರೆ ಸರಿ. ವಾದಿಯರ ಕುಟುಂಬದ ಮೂಲ ಪುರುಷನಾದ ಬಾಳಪ್ಪ ಮೃತ ಪಡುವ ಪೂರ್ವದಲ್ಲೇ ವಾದಿ 1 ವಿನ ಗಂಡ ಹಾಗೂ ವಾದಿ 2 ರಿಂದ 4 ರವರ ತಂದೆ ನಿಂಗರಾಜ ಮೊದಲೇ ಮೃತ ಪಟ್ಟಿರುವನು ಎಂದರೆ ಸರಿ. ಬಾಳಪ್ಪ ದಿಃ 01.11.2017 ರಂದು ಮೃತ ಪಟ್ಟಿರುವನು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ತನಗೆ ದಿನಾಂಕ ಅಷ್ಟೊಂದು ನೆನಸಿರುವುದಿಲ್ಲ ಎಂದು ಉತ್ತರಿಸುವರು. ನಿಂಗರಾಜ 5 ವರ್ಷದ ಬಾಲಕನಾಗಿದ್ದಾಗಲೇ ಬಾಗವ್ವ ದನವಾಡ ಇವಳಿಗೆ ಮಕ್ಕಳು ಆಗದ ಕಾರಣ ನಿಂಗರಾಜನನ್ನು ಅವಳು ತನ್ನ ಸಾಕುಮಗನಂತೆ ಬೆಳೆಸಿರುವಳು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ನಿಂಗರಾಜನ ವಿವಾಹವನ್ನು ಬಾಗವ್ವ ದನವಾಡ ಮಾಡಿರುವಳು ಎಂದರೆ ಸರಿಯಲ್ಲ. ಇತನ ವಿವಾಹ ಆತನ ತಂದೆ ಬಾಳಪ್ಪ ಮಾಡಿರುವನು. ನಿಂಗರಾಜ ಮೃತ ಪಡುವವರೆಗೂ ದನವಾಡರವರ ಮನೆತನದಲ್ಲೇ ವಾಸವಾಗಿದ್ದನು ಎಂದರೆ ಸರಿಯಲ್ಲ.

3. ಬಾಳಪ್ಪನ ತಂದೆಯಾದ ಶಿವಪ್ಪನಿಗೆ ಒಬ್ಬ ಅಡಿವೆಪ್ಪ ಎಂಬ ಸಹೋದರ ಇದ್ದನು. ಶಿವಪ್ಪನಿಗೆ ಅಡಿವೆಪ್ಪ, ಹಣಮಂತಪ್ಪ ಎಂಬ ಇಬ್ಬರು ಸಹೋದರರು ಇದ್ದರು ಎಂದರೆ ಸರಿ. ಶಿವಪ್ಪನ ಸಹೋದರ ಹಣಮಂತಪ್ಪ ಬೆಳಗಲಿಯ ಪಿಕೆಪಿಎಸ್ ಸೊಸೈಟಿಯಲ್ಲಿ ಸೆಕ್ರೆಟರಿ ಅಂತ ಕಾರ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. ಅದೇರೀತಿ ಬಾಳಪ್ಪನು ಸಹ ಬೆಳಗಲಿಯ ಪಿಕೆಪಿಎಸ್ ಸೊಸೈಟಿಯಲ್ಲಿ ಕಾರಕೂನ ಅಂತ ಕೆಲಸ ಮಾಡುತ್ತಿದ್ದ ಎಂದರೆ ಅದರ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ಬಾಳಪ್ಪ 1985 ರಲ್ಲಿ ತನ್ನ ಸಹೋದರನಿಂದ ಪ್ರತ್ಯೇಕವಾಗಿ ವಾಸಿಸುತ್ತಾ ಈ ಕಾರಕೂನ ಅಂತ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ಬಾಳಪ್ಪ ತನ್ನ ಹೆಂಡತಿ ಮತ್ತು ಮಕ್ಕಳ ಜೊತೆ ಹೊಂದಾಣಿಕೆ ಇರದೇ ಇರುವುದರಿಂದ ಆತ ಪ್ರತ್ಯೇವಾಗಿ ಇರುತ್ತಿದ್ದ ಎಂದರೆ ಸರಿಯಲ್ಲ, ಎಲ್ಲರೂ ಕೂಡಿಯೇ ವಾಸವಾಗಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಪ್ರತಿವಾದಿ 2 ರಿಂದ 4 ಮತ್ತು ಅವರ ತಾಯಿ ಇವರು ಸಹ ಬಾಳಪ್ಪನಿಂದ ಪ್ರತ್ಯೇವಾಗಿ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ.

4. ಪ್ರತಿವಾದಿ 2 ಮತ್ತು 3 ರವರು ಹಾಲು ಸಂಗ್ರಹಿಸುವ ಕೇಂದ್ರ ಸ್ಥಾಪನೆ ಮಾಡಿ ಜನರಿಂದ ಹಾಲು ಸಂಗ್ರಹಿಸಿ ಡೈರಿ ಮಾಡುತ್ತಿದ್ದರು ಎಂದರೆ ಸರಿ. ಅದೇ ರೀತಿ ವಾದಿ 1 ರವರು ಸಹ ನಮ್ಮ ಮನೆಗೆ ಬಂದು ಹಾಲು ಸಂಗ್ರಹಿಸಿಕೊಂಡು ಹೋಗುತ್ತಿದ್ದಳು ಎಂದು ಸಾಕ್ಷಿ ಉತ್ತರಿಸುವರು. ಈ ಹಾಲಿನ ಕೇಂದ್ರದ ವ್ಯಾಪಾರದಿಂದ ಬಂದ ಆದಾಯದಲ್ಲಿ ಪ್ರತಿವಾದಿ 2 ರಿಂದ 4 ರವರು ಮೂರು ಪ್ರತ್ಯೇಕವಾದ ಖರೀದಿ ಪತ್ರಗಳ ಮೂಲಕ ಆಸ್ತಿಯನ್ನು ಖರೀದಿ ಮಾಡಿರುವರು ಎಂದರೆ ಸರಿಯಲ್ಲ. ಈ ಮೂರು ಜನರು ತಾವು ಖರೀದಿ ಮಾಡಿರುವ ಆಸ್ತಿಗಳಿಗೆ ತಮ್ಮ ಹೆಸರುಗಳನ್ನು ದಾಖಲು ಮಾಡಿಕೊಂಡು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾ ಬಂದಿರುವರು ಎಂಬ ಪ್ರಶ್ನೆಗೆ ಸಾಕ್ಷಿ ನುಡಿಯುವುದೇನೆಂದರೆ ಈ ಮೂರು ಜನರು ಕೂಡಿಕೊಂಡು ವಾದಿ 1 ವಿನ ಗಂಡನಾದ ನಿಂಗರಾಜನನ್ನು ಜೀತಕ್ಕೆ ಇಟ್ಟು ಆ ಆಸ್ತಿಗಳನ್ನು ಅವರ ಹೆಸರಿನಲ್ಲಿ ಮಾಡಿಕೊಂಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಈ ಸಂಗತಿ ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ನಿಂಗರಾಜ ತನ್ನ ಜೀವಿತ ಕಾಲದಲ್ಲಿ ಪ್ರತಿವಾದಿ 2 ರಿಂದ 4 ರವರು ಖರೀದಿ ಮಾಡಿರುವ ಆಸ್ತಿಯಲ್ಲಿ ತನ್ನದು ಪಾಲು ಇರುವುದಾಗಿ ಎಂದು ಹೇಳಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ

ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಈ ಆಸ್ತಿಯನ್ನು ನಿಂಗರಾಜನೇ ಕಬ್ಜೆಯಲ್ಲಿ ಇರುವುದರಿಂದ ಆ ಕಾರಣಕ್ಕಾಗಿ ಆತ ಅರ್ಜಿ ಸಲ್ಲಿಸಿರುವುದಿಲ್ಲ.

5. 2002 ಮತ್ತು 2003 ನೇ ಸಾಲಿನಲ್ಲಿ ಬಾಳಪ್ಪ ಮತ್ತು ಆತನ ಸಹೋದರರ ಮಧ್ಯೆ ಪಾಲು ವಾಟ್ನಿ ಆಗಿರುವುದು ಎಂದರೆ ಸರಿ. ಆ ಪಾಲು ವಾಟ್ನಿಯ ಪ್ರಕಾರ ಸರ್ವೇ ನಂಬರ್ 298/3 ಬಿ ವಿಸ್ತೀರ್ಣ 7 ಎಕರೆ 10 ಗುಂಟೆಯ ಜಮೀನು ಬಾಳಪ್ಪನ ಪಾಲಿಗೆ ಬಂದಿರುವುದು ಎಂದರೆ ಸರಿ. ಉಳಿದ ಜಮೀನುಗಳು ಬಾಳಪ್ಪನ ಸಹೋದರರ ಪಾಲಿಗೆ ಹೋಗಿರುವವು ಎಂದರೆ ಸರಿ. ಬಾಳಪ್ಪ ಮೃತ ಪಟ್ಟ ನಂತರ ಈ ಸರ್ವೇ ನಂಬರನ ಜಮೀನು ಆತನ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ವಾರಸಾ ಆಗಿರುವುದು ಎಂದರೆ ಸರಿ. ಈ ವಾರಸಾ ಮಾಡಿಕೊಂಡ ನಂತರ ಬಾಳಪ್ಪನ ಪಾಲಿಗೆ ಬಂದಿರುವಂತಹ 7 ಎಕರೆ 10 ಗುಂಟೆಯ ಜಮೀನಿನಲ್ಲಿ ಆತನ ಮಕ್ಕಳು ಪಾಲು ವಾಟ್ನಿ ಮಾಡಿಕೊಂಡಿರುವರು ಎಂದರೆ ಸರಿಯಲ್ಲ. ಈ 7 ಎಕರೆಯ 10 ಗುಂಟೆಯ ಜಮೀನಿನಲ್ಲಿ 5 ಪಾಲು ಮಾಡಿಕೊಂಡು ಅವುಗಳನ್ನು ಅವರೇ ಪ್ರತ್ಯೇವಾಗಿ ಸಾಗುವಳಿ ಮಾಡುತ್ತಿರುವರು ಎಂದರೆ ಸರಿಯಲ್ಲ.

6. ಸರ್ವೇ ನಂಬರ್ 308/4, 308/10 ಹಾಗೂ 308/11 ಈ ಆಸ್ತಿಗಳನ್ನು ಪ್ರತಿವಾದಿ 2 ರಿಂದ 4 ರವರು ತಮ್ಮ ಸ್ವ ಸಂಪಾದನೆಯಿಂದ ಸಂಪಾದನೆ ಮಾಡಿರುವುದರಿಂದ ಈ ಆಸ್ತಿಗಳಲ್ಲಿ ವಾದಿಯರಿಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಮೂರು ಆಸ್ತಿಗಳು ಸಹ ನಿಂಗರಾಜ ಕೂಡಿಯೇ ವಾಸವಾಗಿರುವಾಗ ಖರೀದಿ ಮಾಡಿರುವಂತ ಆಸ್ತಿಯಾಗಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಪ್ರತಿವಾದಿ 2 ರವರು ಖರೀದಿ ಮಾಡಿರುವಂತಹ ಆಸ್ತಿಯನ್ನು ತನ್ನ ಹೆಂಡತಿಯಾದ ರತ್ನವ್ವಳ ಹೆಸರಿನಲ್ಲಿ ಬಕ್ಷಿಸ್ ಪತ್ರ ಮಾಡಿಕೊಟ್ಟಿರುವನು ಎಂದರೆ ಸರಿ. ಏಕೆಂದರೆ ವಾದಿಯರು ಈ ದಾವಾ ಆಸ್ತಿಯಲ್ಲಿ ಪಾಲು ಕೇಳುತ್ತಾರೆ ಎಂಬ ಕಾರಣಕ್ಕೆ ಆ ದಾನ ಪತ್ರ ಮಾಡಿಕೊಟ್ಟಿರುವರು. ಪ್ರತಿವಾದಿ 3 ರವರ ಹೆಸರಿನಲ್ಲಿ ಖರೀದಿ ಮಾಡಿರುವ ಆಸ್ತಿಯನ್ನು ತನ್ನ ಮಗನಾದ ಸಾಗರನ ಹೆಸರಿನಲ್ಲಿ ಬಕ್ಷಿಸ್ ಪತ್ರ ಮಾಡಿಕೊಟ್ಟಿರುವರು ಎಂದರೆ ಸರಿ. ಅದೇ ರೀತಿ ಪ್ರತಿವಾದಿ 4 ರವರು ತನ್ನ ಮಗಳಾದ ಪ್ರತಿವಾದಿ 7 ರವರ ಹೆಸರಿನಲ್ಲಿ ಬಕ್ಷಿಸ್ ಪತ್ರ ಮಾಡಿಕೊಟ್ಟಿರುವನು ಎಂದರೆ ಸರಿ. ಈ

ಖರೀದಿ ಮಾಡಿದ ನಂತರ ಮತ್ತು ದಾನ ಪತ್ರ ಮಾಡಿದ ನಂತರ ಅವರ ಹೆಸರುಗಳಲ್ಲಿ ಹಕ್ಕು ಬದಲಾವಣೆ ಮಾಡಿರುವರು ಎಂದರೆ ಸರಿ.

7. ದಾವಾ ಆಸ್ತಿಗಳಲ್ಲಿ ಇವತ್ತಿನವರಗೊ ವಾದಿಯರ ಮತ್ತು ಪ್ರತಿವಾದಿಯರ ಮಧ್ಯೆ ಯಾವುದೇ ಮೌಖಿಕವಾಹಿ ಪಾಲು ವಾಟ್ನಿ ಆಗಿರುವುದಿಲ್ಲ. ಇತ್ತಿಯವರಗೊ ವಾದಿಯರ ಮತ್ತು ಪ್ರತಿವಾದಿಯರ ಮನೆತನದಲ್ಲಿ ಪಾಲು ವಾಟ್ನಿ ಆಗಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 2 ರಿಂದ 4 ರಲ್ಲಿ ವಾದಿಯರಿಗೆ ಯಾವುದೇ ಪಾಲು ಹಿಸ್ಸಾ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ಅವರು ಕಬ್ಜೆ ಹೊಂದಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ನನಗೆ ವಾದಿ 4 ಆತ್ಮೀಯ ಗೆಳೆಯನಾಗಿರುವನು ಎಂದರೆ ಸರಿಯಲ್ಲ. ನನಗೆ ವಾದಿ ಮತ್ತು ಪ್ರತಿವಾದಿಯರು ಎಲ್ಲರೂ ಪರಿಚಯದವರು ಎಂದು ಸಾಕ್ಷಿ ನುಡಿಯುವರು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹಿತ ವಾದಿಯರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 2 ರಿಂದ 4 ರವರ ಆಸ್ತಿಯನ್ನು ಕಬ್ಜೆಯನ್ನು ಹೊಂದಿ ಸಾಗುವಳಿ ಮಾಡುತ್ತಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿ ಪತ್ರಿಕೆಗಳನ್ನು ನಾನು ನೋಡಿರುವೆನು. ದಾವಾ ಆಸ್ತಿ ಅನು ಕ್ರಮ ಸಂಖ್ಯೆ 2 ರಿಂದ 4 ರಲ್ಲಿ ಯಾವುದೇ ಕಾಲಕ್ಕೂ ನಿಂಗರಾಜನ ಹೆಸರು ದಾಖಲಾಗಿರುವುದಿಲ್ಲ ಎಂದರೆ ಸರಿ . ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಸಿ ಹಾಕಲು ವಾದಿ 4 ರವರೇ ಮಾಹಿತಿ ನೀಡಿರುವರು ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಯ ಕ್ರಮ ಸಂಖ್ಯೆ 2 ರಿಂದ 4 ರಲ್ಲಿ ಹಿಸ್ಸಾ ಇರುವುದಿಲ್ಲ ಎಂಬ ಸಂಗತಿ ಗೊತ್ತಿದ್ದರೂ ಸಹಿತ ವಾದಿಯರ ಮಾತುಕೇಳಿಕೊಂಡು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ 8 ಮತ್ತು 9 ರವರ ಪರ ಶ್ರೀ ಟಿ ಟಿ ಎಂ ವಕೀಲರಿಂದ :**

ಬಾಳಪ್ಪನಿಗೆ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಹೆಣ್ಣುಮಕ್ಕಳಲ್ಲಿ ಮೀನಾಕ್ಷಿ ಎಂಬುವವಳು ಮೃತ ಪಟ್ಟಿರುವಳು. ಈ ಗಂಡು ಮಕ್ಕಳಲ್ಲಿ

ಇಬ್ಬರು ಮೃತ ಪಟ್ಟಿರುವರು. ನಿಂಗರಾಜ ಎಂಬುವವನು ಮೃತ ಪಟ್ಟಿರುವನು. ವಿಜಯಕುಮಾರ ಎಂಬುವವನು ಚಿಕ್ಕವನಿದ್ದಾಗ ಮನೆಯಿಂದ ಹೋದವನೂ ಮರಳಿ ಬಂದಿರುವುದೆಯಿಲ್ಲ. ಬಾಳಪ್ಪನ ಸಂಬಂಧಿಯಾದ ದರೇಪ್ಪ ಸೈದಾಪೂರ ಎಂಬುವವರು ರಾಯಭಾಗ ತಾಲೂಕಿನ ಹಿಡಕಲ ಗ್ರಾಮದಲ್ಲಿ ವಾಸವಾಗಿರುವರು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಬಾಳಪ್ಪನ ಮಗನಾದ ವಿಜಯಕುಮಾರ ಎಂಬುವವನು ಚಿಕ್ಕವನಾಗಿದ್ದಾಗಿನಿಂದಲೂ ದರೇಪ್ಪ ಸೈದಾಪೂರ ಇವರ ಮನೆಯಲ್ಲಿ ವಾಸವಾಗಿದ್ದ ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ವಿಜಯಕುಮಾರ ತನ್ನ ಜೀವಿತ ಕಾಲದಲ್ಲಿ ನಂತರ ದರೇಪ್ಪ ಸೈದಾಪೂರ ಇವರ ಮನೆಯಿಂದ ಸ್ವತಂತ್ರವಾಗಿ ವಾಸಿಸಲು ಪ್ರಾರಂಭಿಸಿರುವನು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಿಃ 22.11.1981 ರಂದು ವಿಜಯಕುಮಾರ ಹಿಡಕಲ ಗ್ರಾಮದ ನಿವಾಸಿಯಾದ ಯಲ್ಲವ್ವಳನ್ನು ವಿವಾಹ ಮಾಡಿಕೊಂಡಿರುವನು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುಲ್ಲ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿ 8 ಮತ್ತು 9 ರವರು ಈ ವಿಜಯಕುಮಾರನ ಮಕ್ಕಳು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ವಿಜಯಕುಮಾರನ ಹೆಂಡತಿ ಹಿಡಕಲ ಗ್ರಾಮದಲ್ಲಿ ದಿಃ 16.03.2003 ರಲ್ಲಿ ಮೃತ ಪಟ್ಟಿರುವನು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ವಿಜಯಕುಮಾರ ದಿಃ 07.05.2019 ರಂದು ಹಿಡಕಲ ಗ್ರಾಮದಲ್ಲಿ ಮೃತ ಪಟ್ಟಿರುವನು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

2. ಪ್ರತಿವಾದಿ 8 ಮತ್ತು 9 ರವರು ವಿಜಯಕುಮಾರ ತಂದೆ ಬಾಳಪ್ಪ ಸಿದ್ದಾಪೂರನ ಮಕ್ಕಳು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ವಿಜಯಕುಮಾರ ಚಿಕ್ಕವನಿದ್ದಾಗ ಮನೆಯಿಂದ ಹೊರಟ ಹೋಗಿರುವುದರಿಂದ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ವಿಜಯಕುಮಾರ ತನ್ನ ಜೀವಿತ ಕಾಲದಲ್ಲಿ ಹಿಡಕಲ ಗ್ರಾಮದಿಂದ ಸಿದ್ದಾಪೂರ ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಿದ್ದ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ 8 ಮತ್ತು 9 ರವರಿಗೂ ಸಮಾನವಾದ ಹಕ್ಕು ಇರುವುದು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ 8 ಮತ್ತು 9 ರವರ

ತಂದೆಯಾದ ವಿಜಯಕುಮಾರನಿಗೆ 1/6 ಹಿಸ್ಸೆ ಇರುವುದು ಎಂದರೆ ಸರಿಯಲ್ಲ. ಪ್ರತಿವಾದಿ 8 ಮತ್ತು 9 ರವರು ವಾರಸಾನಾತೆಯಿಂದ ಈ ದಾವಾ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕನ್ನು ಹೊಂದಿರುವರು ಎಂದರೆ ಸರಿಯಲ್ಲ. ಬಾಳಪ್ಪ ತನ್ನ ಜೀವಿತ ಕಾಲದಲ್ಲಿ ತನ್ನ ಮಕ್ಕಳೊಂದಿಗೆ ಪ್ರತಿವಾದಿ 8 ಮತ್ತು 9 ರವರನ್ನು ಬಿಟ್ಟು ಪಾಲು ವಾಟ್ನಿ ಮಾಡಿಕೊಂಡಿರುವನು ಎಂದರೆ ಸರಿಯಲ್ಲ. ಪ್ರತಿವಾದಿ 8 ಮತ್ತು 9 ರವರು ಮೃತ ವಿಜಯಕುಮಾರನಿಗೆ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ಆ ಕಾರಣಕ್ಕೆ ದಾವಾ ಆಸ್ತಿಗಳಲ್ಲಿ ಇವರಿಗೆ ಪಾಲು ಇರುವುದಿಲ್ಲ ಎಂದು ನಾನು ಸಂಪೂರ್ಣವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಾದಿಯರು ಈ ದಾವೆ ದಾಖಲು ಮಾಡುವ ಪೂರ್ವದಲ್ಲಿ ಅಸಲು ದಾವಾ ನಂ. 149/2022 ರ ದಾವೆ ದಾಖಲು ಮಾಡಿದ್ದರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ಈ ದಾವೆಯ ಪ್ರತಿವಾದಿ 8 ಮತ್ತು 9 ರವರು ಅಸಲು ದಾವಾ ನಂ. 149/2022 ರ ದಾವೆಯಲ್ಲಿ ಪ್ರತಿವಾದಿ 5 ಮತ್ತು 6 ರವರಾಗಿದ್ದರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ಈ ಪ್ರತಿವಾದಿಯರು ಅಸಲು ದಾವಾ ನಂ. 149/2022 ರ ದಾವೆಯಲ್ಲಿ ಎದುರು ಕ್ಲೇಮನ ಹಕ್ಕನು ಸಲ್ಲಿಸಿದ್ದು ಎಂದರೆ ಆ ದಾವೆಗೆ ಅವರು ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ಈ ಎದುರು ಕ್ಲೇಮ ಸಲ್ಲಿಸಿದ ನಂತರ ಈ ದಾವೆಯ ವಾದಿಯರು ಅಸಲು ದಾವಾ ನಂ. 149/2022 ರ ದಾವೆಯನ್ನು ಹಿಂಪಡೆದುಕೊಂಡರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು.

4. ಸರ್ವೇ ನಂಬರ್ 298/3 ಬಿ ಆಸ್ತಿಯು ಬಾಳಪ್ಪನಿಗೆ ವಾಟ್ನಿಯ ಮೂಲಕ ಬಂದಿರುವಂತಹ ಆಸ್ತಿ ಎಂದರೆ ಸರಿ. ಈ ಜಮೀನಿನಿಂದ ಬಂದ ಆದಾಯದಿಂದ ದಾವಾ ಆಸ್ತಿ ಕ್ರ ಸಂಖ್ಯೆ 2 ರಿಂದ 4 ನ್ನು ಖರೀದಿ ಮಾಡಿರುವರು ಎಂದರೆ ಸರಿ. ಈ ಆಸ್ತಿಗಳು ವಾದಿಯರು ಮತ್ತು ಪ್ರತಿವಾದಿಯರ ಕಬ್ಜೆ ವಹಿವಾಟೆಯಲ್ಲಿ ಇರುವವು ಎಂದರೆ ಸರಿಯಲ್ಲ. ಈ ದಾವಾ ಆಸ್ತಿಗಳಲ್ಲಿ ಪ್ರತಿವಾದಿ 8 ಮತ್ತು 9 ರವರಿಗೂ ಸಹ 1/6 ಹಿಸ್ಸೆ ಪಾಲು ಇರುವುದು ಎಂದರೆ

ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಎಲ್ಲಾ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ